ಫ್ರಾಸಾ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ
ದಿನಾಂಕಃ **25-07-2025**

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿವಿ ವಕೀಲರಿಂದ

6. ನನಗೆ ಕನ್ನಡ ಓದಲು ಬರೆಯಲು ಇಲ್ಲ ಎಂದರೆ ಸರಿ. ನಾನು ದೂರನ್ನು ಶಹಾಪೂರದಲ್ಲಿ ಬೆರಳಚ್ಚು ಮಾಡಿಸಿದ್ದು ಯಾವ ಅಂಗಡಿ ಅಂತಾ ನನಗೆ ನೆನಪಿಲ್ಲ. ಜಮೀನು ನನ್ನ ತಂದೆ ಹೆಸರಿನಲ್ಲಿದೆ ಎಂದರೆ ನನ್ನ ತಂದೆ ಮತ್ತು ದೊಡ್ಡಪ್ಪನ ಹೆಸರಿನಲ್ಲಿದೆ ಎಂದು ಹೇಳುತ್ತಾರೆ. ನನ್ನ ಹೆಸರಿನಲ್ಲಿ ಸದರಿ ಜಮೀನು ಇಲ್ಲಾ ಎಂದರೆ ಸರಿ. ತಹಶಿಲ್ದಾರವರಿಗೆ ನನ್ನ ತಂದೆ ಅರ್ಜಿ ನೀಡಿರುತ್ತಾರೆ ಎಂದರೆ ಸರಿ. ನಾನು ನೀಡಿಲ್ಲ ಎಂದರೆ ಸರಿ. ನಮ್ಮ ತಂದೆಯವರ ಕೆಲಸ ತಹಶೀಲ್ದಾರವರ ಬಳಿ ಇದ್ದು ಆರೋಪಿತರ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿ ಅಂಶಗಳನ್ನು ತಿದ್ದುಪಡಿ ಮಾಡುವ ಅಧಿಕಾರ ತಹಶೀಲ್ದಾರವರಿಗೆ ಮಾತ್ರ ಇರುತ್ತದೆ ಎಂದೆರ ಆರೋಪಿತರು ವಿಷಯ ನಿರ್ವಾಹಕರು ಆಗಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿತರು ವಿಷಯ ನಿರ್ವಾಹಕರು ಆಗಿದ್ದರು ಅಂತಾ ಲೋ. ಪೋಲೀಸರಿಗೆ ಹೇಳಿಲ್ಲಾ ಎಂದರೆ ಸರಿಯಲ್ಲ.

7. ನನ್ನ ಕೈಗಳನ್ನು ಸೋಡಿಯಂ ಕಾರ್ಬೋನೆಟ ದ್ರಾವಣದಲ್ಲಿ ತಹಶಿಲ್ದಾರ ಕಚರೆಯಲ್ಲಿ ತೊಳೆದಿಲ್ಲಾ ಎಂದರೆ ಸರಿ. ನನ್ನ ಶರ್ಟ ಮತ್ತು ಕರವಸ್ತ್ರ ಸೋಡಿಯಂ ಕಾರ್ಬೋನೆಟ ದ್ರಾವಣದಲ್ಲಿ ಮತ್ತು ಜಪ್ತಿಪಡಿಸಿಕೊಂಡಿಲ್ಲಾ ಎಂದರೆ ಸರಿ. ನೆರಳು ಸಾಕ್ಷಿ ಮತ್ತು ಪಂಚಸಾಕ್ಷಿಯ ಕೈಗಳನ್ನು ಸೋಡಿಯಂಕಾರ್ಬೋನೆಟ ದ್ರಾವಣದಲ್ಲಿ ತಹಶಿಲ್ದಾರ ಕಚರೆಯಲ್ಲಿ ತೊಳೆದಿಲ್ಲಾ ಎಂದರೆ ಸರಿ. ಶ್ರೀನಿವಾಸ ಮುಖ್ಯ ಪೇದೆ ರವರ ಕೈಗಳನ್ನು ಸೋಡಿಯಂಕಾರ್ಬೋನೆಟ ದ್ರಾವಣದಲ್ಲಿ ತಹಶಿಲ್ದಾರ ಕಚರೆಯಲ್ಲಿ ತೊಳೆದಿಲ್ಲಾ ಎಂದರೆ ಸರಿ.

8. ನಾನು ಏಷ್ಟು ಬಾರಿ ತಹಶೀಲ್ದಾರ ಕಚೇರಿಗೆ ಹೋಗಿದ್ದೆ ಎಂಬ ಬಗ್ಗೆ ನನ್ನ ದೂರಿನಲ್ಲಿ ಬರೆದಿಲ್ಲಾ ಎಂದರೆ ಸರಿ. ನನ್ನ ತಂದೆ ಕಡತದ ಬಗ್ಗೆ ತಹಶೀಲ್ದಾರವರ ಬಳಿ ನಾನು ವಿಚಾರಣೆ ಮಾಡಿಲ್ಲ. ನನ್ನ ತಂದೆ ಅಥವಾ ದೊಡ್ಡಪ್ಪ ಯಾವುದೇ ಅಧಿಕಾರ ಪತ್ರ ಕೊಟ್ಟಿಲ್ಲಾ ಎಂದರೆ ಸರಿ. ಸಿ.ಡಿ ಯಲ್ಲಿನ ದ್ವನಿ ಮುದ್ರಣದಲ್ಲಿ ಆರೋಪಿತರು ಲಂಚದ ಬೇಡಿಕೆ ಇಟ್ಟ ಬಗ್ಗೆ ಸಂಭಾಷಣೆ ಇಲ್ಲಾ ಎಂದರೆ ಸರಿಯಲ್ಲ. ಯಾರು ಯಾರೊಂದಿಗೆ ಯಾವ ಕಾರಣಕ್ಕೆ ಮಾತನಾಡಿದ್ದಾರೆ ಎಂಬ ಬಗ್ಗೆ ಸಿ.ಡಿ ಯಲ್ಲಿ ಉಲ್ಲೇಖ ಇಲ್ಲಾ ಎಂದರೆ ಸರಿಯಲ್ಲ.

9. ಟೇಬಲ್ ಡ್ರಾದಲ್ಲಿ ಯಾವ ದಾಖಲಾತಿ ಇದ್ದವು ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಭಾವ ಚಿತ್ರಗಳನ್ನು ನೋಡಿದರೆ ಯಾವ ದಿನಾಂಕದಂದು ಮತ್ತು ಎಲ್ಲಿ ತೆಗೆಯಲಾಗಿರುತ್ತವೆ ಎಂದು ತಳಿಯಲಾಗುವುದಿಲ್ಲ ಎಂದರೆ ಸರಿ. ನಾನು ಹೇಳಿಕೆ ಕೊಡುವ ಕಾಲಕ್ಕೆ ಕನ್ನಡ ಭಾಷೆಯಲ್ಲಿ ಮಾತನಾಡಿದ್ದೆ.

10. ಮಾರ್ಚ 2014 ರಲ್ಲಿ ಸಂಸತ್ತಿನ ಚುನಾವಣೆ ಇತ್ತು ಎಂದರೆ ನನಗೆ ಗೂತ್ತಿಲ್ಲ. ತಹಶೀಲ್ದಾರ ಕಚೇರಿಯ ಕಾಂಪೌಂಡ ಒಳಗೆ ನಿಂತು ನೋಡಿದರೆ ಆರೋಪಿತರ ಕಚೇರಿಯ ಮೊದಲನೆ ಮಹಡಿಯಲ್ಲಿನ ಚಟುವಾಟಿಕೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಮೊದಲನೆ ಮಹಡಿಯಿಂದ

ಮಾತನಾಡುವುದು ಕಚೇರಿಯ ಕಾಂಪೌಂಡನಲ್ಲಿ ನಿಂತವರಿಗೆ ಕೇಳಿಸುವುದಿಲ್ಲ ಎಂದರೆ ಸರಿ. ಚುನಾವಣೆ ಇದ್ದ ಕಾರಣ ತಾಲೂಕು ಕಚೇರಿಯಲ್ಲಿ ಸಾಕಷ್ಟು ಜನ ಇದ್ದರು ಎಂದರೆ ಸಾದಾರವಾಗಿ ದಿನ ನಿತ್ಯದಂತೆ ಇದ್ದರು ಅಂತಾ ಸಾಕ್ಷಿ ನುಡಿಯುತ್ತಾರೆ.

11. ಜಮೀನನ್ನು ನನ್ನ ತಂದೆ 1977 ರಲ್ಲಿ ಖರೀದಿ ಮಾಡಿರುತ್ತಾರೆ. ಯಾರಿಂದ ಎಂದು ಗೊತ್ತಿಲ್ಲ. ಸದರಿ ಜಮೀನು ಜಾಗಿರಿ ಜಮೀನು ಎಂದರೆ ಸರಿಯಲ್ಲ.

12. ಕಂದಾಯ ನಿರೀಕ್ಷಕರು ಸ್ಥಳಕ್ಕೆ ಬಂದು ಯಾವುದೇ ವರದಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನನ್ನದು ಆರೋಪಿತರ ಬಳಿ ಯಾವುದೇ ಕೇಲಸ ಇರಲಿಲ್ಲ ಮತ್ತು ನಾನು ಅವರ ಬಳಿ ಹೋಗಿರಲಿಲ್ಲವಾದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಮಾರ್ಚ 2014 ರಲ್ಲಿ ಚುನಾವಣೆ ಕರ್ತವ್ಯಕ್ಕೆ ನಿಯೋಜಿತರಾಗಿದ್ದರು ಎಂದರೆ ಸರಿಯಲ್ಲ.

13. ಬೆನಕನಳ್ಳಿ (ಜೆ) ಗ್ರಾಮದ ಸರ್ವೆ ನಂ. 13 ರಲ್ಲಿ 6 ಎಕರೆ 2 ಗುಂಟೆ ಜಾಗಿರ ಜಮೀನು ಇರುತ್ತದೆ. ಅದರಲ್ಲಿ 15 ವರ್ಷಗಳ ವರೆಗೆ ಪರಬಾರೆ ಮಾಡಬಾರದು ಎಂದು ನಿಬಂಧನೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿಬಂಧನೆ ಹಳೆ ಪಹಣಿಯಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನಿಭಂದನೆಯನ್ನು ತೆಗೆಯಬೇಕು ಎಂದು ತಹಶೀಲ್ದಾರ ಶಹಾಪೂರ ಅವರ ಕಛೇರಿಗೆ ನಮ್ಮ ತಂದೆ ಅರ್ಜಿ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಇಬ್ಬರ ಜಂಟಿ ಹೆಸರಿನಲ್ಲಿ ಆ ಜಮೀನು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆ ಕಾಲಂ. ನಂ.11 ರಲ್ಲಿ ಈ ಬಗ್ಗೆ ಶರ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕಛೇರಿಯಲ್ಲಿ ಇದ್ದು ನನ್ನನ್ನು ಹಲವಾರು ಬಾರಿ ಕರೆಯಿಸಿಕೊಂಡಿದ್ದರು. 4,000/- ರೂಪಾಯಿ ಹಣವನ್ನು ಕೆಲಸ ಮಾಡಬೇಕಾದರೆ ಕೊಡಬೇಕಾಗುತ್ತದೆ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯನ್ನು ಕೇಳಿ ಕೊಡುತ್ತೇನೆ ಎಂದು ವಾಪಾಸ ಬಂದೆ. ನಾನು ಈ ವಿಷಯವನ್ನು ನಮ್ಮ ಸ್ನೇಹಿತರಿಗೆ ಹೇಳಿದ್ದು ಅವರು ಯಾದಗಿರಿ ಲೋಕಾಯುಕ್ತ ಕಛೇರಿಗೆ ಹೋಗಿ ಮಾಹಿತಿ ಕೊಡುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಅರ್ಜಿ ಬರೆದುಕೊಂಡು ಯಾದಗಿರಿ ಲೋಕಾಯುಕ್ತ ಕಛೇರಿಗೆ ಬಂದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಲೋಕಾಯುಕ್ತ ಪೊಲೀಸರಿಗೆ ದೂರಿನ ಬಗ್ಗೆ ವಿಷಯ ತಿಳಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸರು ನನಗೆ ವೈಸ ರಿಕಾರ್ಡರ ಕೊಟ್ಟು ಆರೋಪಿಯನ್ನು ಮಾತನಾಡಿಸಿ ರಿಕಾರ್ಡ ಮಾಡಿಕೊಂಡು ಬರುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಆರೋಪಿಯ ಕಛೇರಿಗೆ ಹೋಗಿ ಆತನನ್ನು ಕೇಳಿದ್ದಕ್ಕೆ ಆರೋಪಿ 4,000/- ರೂಪಾಯಿ ಕೊಟ್ಟರೆ ಕೆಲಸ ಮಾಡಿಕೊಡುತ್ತೇನೆ ಎಂದು ಹೇಳಿದ್ದು ನಾನು ಬಡವನಿದ್ದೇನೆ ಎಂದು ಹೇಳಿದ್ದಕ್ಕೆ 500/- ರೂಪಾಯಿ ಕಡಿಮೆ ಕೊಡು ಎಂದು ಹೇಳಿದ ನಂತರ ನಾನು ಯಾದಗಿರಿ ಲೋಕಾಯುಕ್ತ ಕಛೇರಿಗೆ ಬಂದೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈಸ ರಿಕಾರ್ಡರನ್ನು ಪೊಲೀಸರಿಗೆ ಕೊಟ್ಟ, ನಾನು ದೂರನ್ನು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದೂರನ್ನು ದಿನಾಂಕಃ 16-03-2014 ರಂದು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಲೋಕಾಯುಕ್ತ ಪೊಲೀಸರು ಇಬ್ಬರು ಪಂಚರನ್ನು ಕರೆಯಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ನಾನು 500/- ರೂ. ಮುಖ ಬೆಲೆಯ 7 ನೋಟುಗಳನ್ನು ಪಿಐ ಅವರಿಗೆ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15.03.2014 ರಂದು ನಾನು ದೂರನ್ನು ಕೊಟ್ಟಿದ್ದು ಮುಖ್ಯ ವಿಚಾರಣೆಯಲ್ಲಿ ಮರೆತು ತಪ್ಪಾಗಿ ಹೇಳಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದೂರು ಕೊಟ್ಟ ನಂತರ ಮಲ್ಲಣ್ಣಗೌಡ ಮತ್ತು ಶಿವರೆಡ್ಡಿ ಎಂಬ ಪಂಚರನ್ನು ಕರೆಯಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೋಕಾಯುಕ್ತ ಕಛೇರಿಗೆ ಬೇಟಿಯಾದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ಶಿವರೆಡ್ಡಿ ಮತ್ತು ಮಲ್ಲಣ್ಣಗೌಡ ಇಬ್ಬರು ಪಂಚರು ಬಂದು ಲೋಕಾಯುಕ್ತ ಪಿ.ಐ. ಅವರನ್ನು ಬೇಟಿಯಾದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಂದಿದ್ದ ಅರ್ಜಿಯನ್ನು ಅವರಿಗೆ ತೋರಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿದ್ದ ವಿಷಯವನ್ನು ಅವರುಗಳಿಗೆ ಹೇಳಿದೆ. ಅವರು ಪಂಚರಾಗಲು ಒಪ್ಪಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಬೈಲನಲ್ಲಿ ನಾನು ಆರೋಪಿ 4,000/- ರೂ ಹಣ ಕೊಡಬೇಕೆಂದು ನನ್ನ ಬಳಿ ಮಾತನಾಡಿದ್ದನ್ನು ನಾನು ರೆಕಾರ್ಡ ಮಾಡಿಕೊಂಡಿದ್ದು ಅದನ್ನು ಹಾಜರಪಡಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೊಬೈಲ ರೆಕಾರ್ಡನ್ನು ಕೇಳಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ವಿಷಯ ಮತ್ತು ಮೊಬೈಲನಲ್ಲಿ ರೆಕಾರ್ಡ ಆಗಿದ್ದ ಮಾಹಿತಿ ಒಂದೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಜಮೀನಿನ ಪಹಣಿ ಸರ್ವೆ ನಂ.6 ಬೆನಕನಳ್ಳಿ (ಜೆ) ಗ್ರಾಮದ ಜಮೀನನ್ನು 15 ವರ್ಷಗಳ ಕಾಲ ಪರಬಾರೆ ಮಾಡಬಾರದು ಎಂದು ನಿಬಂಧನೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನಿಬಂಧನೆಯನ್ನು ತೆಗೆಯಲು 4,000/- ರೂ ಲಂಚ ಕೊಡಬೇಕು ಎಂದು ನ್ಯಾಯಾಲಯದ ಮುಂದೆ ಇರುವ ಆರೋಪಿ ಲಂಚ ಕೇಳಿದರು ಆ ಬಗ್ಗೆ ಮಾತದ್ದು ಅದರಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಸಿ.ಡಿ. ಮಾಡಿ ಪ್ಯಾಕ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಣ ತಂದಿರುವ ಬಗ್ಗೆ ಲೋಕಾಯುಕ್ತ ಪೊಲೀಸರು ಕೇಳಿದರು 500/-ರೂ ನ 7 ನೋಟುಗಳನ್ನು ತಂದಿದ್ದೇನೆ ಎಂದು ಹೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಹಣವನ್ನು ಲೋಕಾಯುಕ್ತ ಇನ್ಸಪೇಕ್ಟರ ಅವರ ಕೈಗೆ ನಾನು ಕೊಟ್ಟಿದ್ದು ಶಿವರೆಡ್ಡಿ ಕೈಗೆ ಕೊಟ್ಟು ಎಣಿಸುವಂತೆ ಹೇಳಿದ್ದು ಆತ ನೋಟಿನ ನಂಬರ ಹೇಳಿದಂತೆ ಮಲ್ಲಣ್ಣಗೌಡ ಒಂದು ಹಾಳೆಯಲ್ಲಿ ನೋಟುಗಳ ನಂಬರನ್ನು ಬರೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿನಾಪ್ತಲಿನ ಪೌಡರ ಮತ್ತು ಇನ್ನೊಂದು ಪೌಡರ ಬಗ್ಗೆ ಮಾಹಿತಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿನಾಪ್ತಲಿನ ಪೌಡರ ಹಚ್ಚಿದ ವಸ್ತುವನ್ನು ನೀರಿನಲ್ಲಿ ಹಾಕಿದರೆ ಅದು ಗುಲಾಬಿ ಬಣ್ಣಕ್ಕೆ ಬರುತ್ತದೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೇದೆ ನೀಲಕಂಠ ಅವರಿಗೆ ಆ ನೋಟುಗಳನ್ನು ಕೊಟ್ಟಿದ್ದು ಆತ ಪಿನಾಪ್ತಲಿನ ಪೌಡರ ಹಚ್ಚಿದ ಆ ನೋಟುಗಳನ್ನು ಶಿವರೆಡ್ಡಿ ಕೈಗೆ ಕೊಟ್ಟ ಸದರಿ ಶಿವರೆಡ್ಡಿ ಆ ನೋಟುಗಳನ್ನು ಎಣಿಸಿದ ನಂತರ ನನ್ನ ಶರ್ಟನ ಜೇಬಿನಲ್ಲಿ ಇಟ್ಟನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ಬಟ್ಟಲಿನಲ್ಲಿ ಧ್ರಾವಣ ಕಲಿಸಿದ್ದು ಅದಕ್ಕೆ ಶಿವರೆಡ್ಡಿಯ ಕೈ ಬೆರಳುಗಳು ಅದ್ದಿದ್ದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಧ್ರಾವಣವನ್ನು 2 ಬಾಟಲಗಳಲ್ಲಿ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವುಗಳನ್ನು ಪ್ಯಾಕ ಮಾಡಿ ಜೆ.ಜೆ. ಎಂದು ಸೀಲ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಎರಡು ಪೌಡರಗಳನ್ನು ಬೇರೆ ಬೇರೆ ಪೊಟ್ಟಗಳಲ್ಲಿ ಹಾಕಿ ಸೀಲ್ ಮಾಡಿ ಕಛೇರಿಯಲ್ಲಿ ಇಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿ ಹಣ ಕೇಳಿದರೆ ಕೊಡು ಎಂದು ಹೇಳಿದ್ದು ಆ ನಂತರ ಆರೋಪಿಯ ಕೈ ಬಣ್ಣದ ನೀರು ಗುಲಾಬಿ ಬಣ್ಣಕ್ಕೆ ಬರುತ್ತದೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಫೋಟೂಗಳನ್ನು ತೆಗೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೆರಳು ಸಾಕ್ಷಿ ಮಲ್ಲಣ್ಣಗೌಡನನ್ನು ನನ್ನ ಜೊತೆ ಹೋಗುವಂತೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15.03.2014 ರಂದು ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಲೋಕಾಯುಕ್ತ ಕಛೇರಿಯಲ್ಲಿ ಪಂಚನಾಮೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು 4 ಚಕ್ರದ ವಾಹನಗಳಲ್ಲಿ ನಾವುಗಳು ಬೆಳಿಗ್ಗೆ 11-00 ಗಂಟೆಗೆ ಯಾದಗಿರಿ ಬಿಟ್ಟು ಶಹಾಪೂರ ಕೆ.ಇ.ಬಿ. ಕಛೇರಿ ಆಫೀಸ ಹತ್ತಿರ ನಿಲ್ಲಿಸಿ ನಮಗೆ ಮಾಹಿತಿಯನ್ನು ಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಲ್ಲಣ್ಣಗೌಡನನ್ನು ನನ್ನ ಜೊತೆ ಕಳುಹಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಜೀಪ ನಿಲ್ಲಿಸಿದ ನಂತರ ಶಹಾಪೂರ ತಹಶೀಲ್ದಾರ ಕಛೇರಿಗೆ ನಾನು ಮತ್ತು ಮಲ್ಲಣ್ಣಗೌಡ ಒಳಗೆ ಹೋದೆವು ಉಳಿದ ಸಿಬ್ಬಂದಿಗಳು, ಪಂಚರು ಮತ್ತು ಅಧಿಕಾರಿಗಳು ಅಲ್ಲಲ್ಲಿ ಕಾಣುವಂತೆ ನಿಂತುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಛೇರಿ ಒಳಗೆ ಹೋದಾಗ ಬೆಳಿಗ್ಗೆ 12-15 ಗಂಟೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ತಹಶೀಲ್ದಾರ ಕಛೇರಿಯ ಮೊದಲನೇ ಅಂತಸ್ಥಿಗೆ ಇಬ್ಬರು ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಆರೋಪಿ ಮೊದಲನೇ ಅಂತಸ್ಥಿನ ಕೊನೆಯ ರೂಮನಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಜಮೀನಿನಲ್ಲಿ 15 ವರ್ಷ ಪರಬಾರೆ ಮಾಡಬಾರದು ಎಂಬ ನಿಬಂಧನೆಯನ್ನು ತೆಗೆದು ಹಾಕಲು ಕೇಳಿದ್ದೇನಲಾ ಎಂದಾಗ ಆರೋಪಿ ಹಣ ತಂದಿದ್ದಿಯಾ ಎಂದು ಕೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 3,500/- ರೂ

ತಂದಿದ್ದೇನೆ ತೆಗೆದುಕೊಳ್ಳಿ ಎಂದು ಹೇಳಿದೆ ಆರೋಪಿಗೆ ಹಣ ಎಣಿಸಿಕೊಳ್ಳುವಂತೆ ಹೇಳಿದೆ ಆಗ ಆರೋಪಿ ಡ್ರಾ ತೆಗೆದು ಹಣ ಡ್ರಾ ಒಳಗೆ ಹಾಕಲು ಸನ್ನೆ ಮಾಡಿ ತೋರಿಸಿದ ನಾನು ಆ ಡ್ರಾದಲ್ಲಿ ಹಣವನ್ನು ಇಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೊರಗೆ ಬಂದ ನಂತರ ಲೋಕಾಯುಕ್ತ ಇನ್ಸಪೇಕ್ಟರ ಅವರಿಗೆ ಸಿಗ್ನಲ್ ಕೊಟ್ಟೆ ಅವರೆಲ್ಲರೂ ಒಳಗೆ ಬಂದು ಆರೋಪಿಯನ್ನು ಹಿಡಿದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಅವರನ್ನು ಯಾರು ಎಂದು ಕೇಳಿದ್ದು ಪಿ.ಐ ಅವರು ತಮ್ಮ ಗುರುತಿನ ಚೀಟಿಯನ್ನು ತೋರಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಂಚದ ವಿಷಯವಾಗಿ ಹಿಡಿಯಲು ಬಂದಿದ್ದೇವೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಈತನೇ ಹಣ ಅವನ್ನು ಡ್ರಾದಲ್ಲಿ ಹಾಕು ಎಂದು ಹೇಳಿದ ಮೇರೆಗೆ ಹಾಕಿದ್ದೇನೆ ಎಂದು ಹೇಳಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಹಣವನ್ನು ಡ್ರಾದಿಂದ ತೆಗೆದು ಲೋಕಾಯುಕ್ತ ಪೊಲೀಸರು ಎಣಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

ಫ್ರಾಸಾ-2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ
ದಿನಾಂಕಃ **25-07-2025**
ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿವಿ ವಕೀಲರಿಂದ

9. ನಾನು ಮತ್ತು ಚಾಸಾ-3 ಶಿವರೆಡ್ಡಿ ಸರ್ಕಾರಿ ಅಧಿಕಾರಿ ಎಂದರೆ ಸರಿ. ನಾವು ಶಹಾಪೂರ ನಗರದ ನಾಗರಿಕರು ಎಂದರೆ ಸರಿಯಲ್ಲ. ನಾವು ಲೋಕಾಯುಕ್ತ ಅಧಿಕಾರ ವ್ಯಾಪ್ತಿಯಲ್ಲಿ ಒಳಪಡುತ್ತೇವೆ ಎಂದರೆ ಸರಿ.

10. ಮಾರ್ಚ 2014 ರಲ್ಲಿ ಲೋಕಸಭೆ ಚುನಾವೆ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ತಹಶೀಲ್ದಾರ ಕಚೇರಿಯ ಕೆಳಭಾಗದಿಂದ ಮೊದಲನೆ ಮಹಡಿಯ ಕಚೇರಿಯ ಒಳಗೆ ಏನು ನಡೆಯುತ್ತದೆ ಎಂದು ಕಾಣುವುದಿಲ್ಲ ಮತ್ತು ಕೇಳಿಸುವುದಿಲ್ಲ ಎಂದರೆ ಸರಿ. ಶಹಾಪೂರ ತಹಶೀಲ್ದಾರ ಕಚೇರಿ ಮತ್ತು ಕೆಇಬಿ ಕಚೇರಿ ಮತ್ತು ನಗರಸಭೆ ಕಚೇರಿಗಳು ಅಕ್ಕ ಪಕ್ಕ ಇದ್ದು ಹೆಚ್ಚು ಜನನೀಬಿಡ ಇರುತ್ತದೆ ಎಂದರೆ ಸರಿ.

11. ದೂರುದಾರನ ಶರ್ಟ ಮತ್ತು ಕರವಸ್ತ್ರವನ್ನು ಸೋಡಿಯಂಕಾರ್ಬೊನೇಟ ದ್ರಾವಣದಲ್ಲಿ ತೊಡಳೆದಿಲ್ಲ ಮತ್ತು ಅವುಗಳನ್ನು ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿ. ತಹಶೀಲ್ದಾರ ಕಚೇರಿಯಲ್ಲಿ ನನ್ನ ಶಿವರೆಡ್ಡಿ ಮತ್ತು ದೂರುದಾರನ ಕೈಗಳನ್ನು ಸೋಡಿಯಂಕಾರ್ಬೊನೇಟ ದ್ರಾವಣದಲ್ಲಿ ತೊಡಳೆದಿಲ್ಲ ಎಂದರೆ ಸರಿ. ನೋಟುಗಳನ್ನು ಸೋಡಿಯಂಕಾರ್ಬೊನೇಟ ದ್ರಾವಣದಲ್ಲಿ ತೊಡಳೆದಿಲ್ಲ ಎಂದರೆ ಸರಿ.

12. ಭಾವಚಿತ್ರಗಳನ್ನು ಎಲ್ಲಿ ಮತ್ತು ಯಾವ ಸಮಯಕ್ಕೆ ತೆಗೆಯಲಾಗಿದೆ ಎಂದು ಅವುಗಳ ಮೇಲೆ ನಮೂದು ಇಲ್ಲಾ ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿನ ಷರಾ ತೆಗೆಯುವ ಅಧಿಕಾರ ಆರೋಪಿತರಿಗೆ ಇಲ್ಲಾ ಎಂದರೆ ನನಗೆ ಗೊತ್ತಿಲ್ಲ. ಸಿಡಿಯಲ್ಲಿನ ಸಂಭಾಷಣೆ ಯಾರು ಯಾರಿಗೆ ಮಾತನಾಡಿರುತ್ತಾರೆ ಅಂತಾ ನಮೂದು ಇಲ್ಲಾ ಎಂದರೆ ಸರಿ.

13. ಶ್ರೀನಿವಾಸ ಇವರ ಕೈಗಳನ್ನು ಸೋಡಿಯಂಕಾರ್ಬೊನೇಟ ದ್ರಾವಣದಲ್ಲಿ ತೊಡಳೆದಿಲ್ಲ ಎಂದರೆ ಸರಿ. ಆ ಕಾಲಕ್ಕೆ ತಹಶೀಲ್ದಾರ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದ ದೂರಿಗೆ ಪೂರಕವಾರದ ದಾಖಲಾತಿಗಳನ್ನು ಯಾರು ದೃಢೀಕರಿಸಿದರು ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ನೆರಳು ಸಾಕ್ಷಿಯಾಗಿ ಹೋಗದಿದ್ದರೂ ಸರ್ಕಾರಿ ನೌಕರ ಆದ ಕಾರಣ ಲೋ. ಪೋಲೀಸರಿಗೆ ಹೆದರಿ ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

14. ದಿಃ **15.03.2014** ರಂದು ಲೋಕಾಯುಕ್ತ ಕಛೇರಿಂದ ನಮ್ಮ ಶಾಲೆಗೆ ಕೋರಿಕೆ ಪತ್ರ ಸಲ್ಲಿಸಿದ್ದು ಅದರಂತೆ ಮುಖ್ಯ ಗುರುಗಳು ನನ್ನನ್ನು ಮೌಖಿಕ ಆದೇಶದ ಮೇರೆಗೆ ಲೋಕಾಯುಕ್ತ ಕಛೇರಿ ಯಾದಗಿರಿಗೆ ಹೋಗುವಂತೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೆಳಿಗ್ಗೆ **9-45** ಗಂಟೆಗೆ ನಾನು ಲೋಕಾಯುಕ್ತ ಕಛೇರಿಗೆ ಹೋದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಶಿವರೆಡ್ಡಿ ಎನ್ನುವವರು ಇದ್ದರು ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಸಹ ಜಿ.ಎಮ್.ಎಸ್. ಕನ್ಯಾ ಶಾಲೆ ಯಾದಗಿರಿಯ ಸಹ-ಶಿಕ್ಷಕರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಪಿಐ ಬಿ.ಬಿ. ಪಾಟೀಲ ಇದ್ದರು ಅವರಿಗೆ ನಾನು ಪರಿಚಯ ಮಾಡಿಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಒಬ್ಬ ವ್ಯಕ್ತಿ ಕುಳಿತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನ ಹೆಸರು ಮಹ್ಮದ ಇಸ್ಮಾಯಿಲ್ ತಂದೆ ಮಹ್ಮದ ಇಬ್ರಾಹಿಂ ಪಿಐ ಅವರು ಆತನ ಪ್ರಕರಣ ದಾಖಲಿಸಲು ಬಂದಿದ್ದಾರೆ ಅದಕ್ಕೆ ನೀವು ಪಂಚರಾಗಿ ಸಹಕರಿಸಬೇಕು ಎಂದು ಹೇಳಿದರು ಅದಕ್ಕೆ ನಾವು ಒಪ್ಪಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತ ಕೊಟ್ಟ ಅರ್ಜಿ ಓದಿದಾಗ ಅದರಲ್ಲಿ ಬೆನಕನಳ್ಳಿ ಸರ್ವೆ ನಂ. 13 ರಲ್ಲಿ 6 ಎಕರೆ 2 ಗುಂಟೆ ಜಮೀನು ಮಹ್ಮದ ಇಸ್ಮಾಯಿಲ್ ಆತನ ತಂದೆ ಮತ್ತು ಆತನ ದೊಡ್ಡಪ್ಪನ ಹೆಸರಿನಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪಹಣಿಯ ಕಾಲಂ. 12 ರಲ್ಲಿ 1983-84, 1988-89, 1992-93 ರ ವರೆಗೆ ಯಾವುದೆ ಷರಾ ಇರುವುದಿಲ್ಲ ಮತ್ತು ಖಾಲಿ ಇತ್ತು ಅದರಲ್ಲಿ 15 ವರ್ಷಗಳ ಕಾಲ ಪರಬಾರೆ ಮಾಡಬಾರದು ಎಂದು ನಮೂದಿಸಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಷರಾ 2013 ರ ವರೆಗೆ ಇತ್ತು. 2014 ರಲ್ಲಿ ಪಹಣಿ ತೆಗೆಸಿ ನೋಡಿದಾಗ ಸಹ ಅದೇ ರೀತಿ ಷರಾ ಇತ್ತು ಅದಕ್ಕಾಗಿ ದಿಃ 30.01.2014 ರಂದು ಮಹ್ಮದ ಇಸ್ಮಾಯಿಲ್ ಅವರ ತಂದೆ ಒಂದು ಅರ್ಜಿಯನ್ನು ಶಹಾಪೂರ ತಹಶೀಲ್ದಾರ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಅರ್ಜಿ ಸಲ್ಲಿಸಿ ಅಲ್ಲಿರುವಂತಹ ಎಫ್.ಡಿ.ಎ. ಮಲ್ಲಪ್ಪ ವಗ್ಗಿ ಅವರನ್ನು ಬೇಟಿಯಾದಾಗ ಅವರು ಷರಾ ತಿದ್ದುಪಡಿ ತೆಗೆಯಲ್ಲಿ ರೂ.4,000/- ಲಂಚ ಕೇಳುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಫಿರ್ಯಾದಿ ತಂದೆ ಬಡವ ಇದ್ದು ಅಷ್ಟು ಹಣ ಕೊಡಲು ಆಗುವುದಿಲ್ಲ ಎಂದು ಹೇಳಿದಕ್ಕೆ 500/- ರೂ ಕಡಿಮೆ ಮಾಡಿ 3,500/- ರೂ ಕೊಡುವಂತೆ ಹೇಳಿದ್ದು ಅವರಿಗೆ ಲಂಚ ಕೊಡಲು ಮನಸಿಲ್ಲದ ಕಾರಣ ದಿಃ 14.03.2014 ರಂದು ಲೋಕಾಯುಕ್ತ ಕಛೇರಿಗೆ ಬಂದು ಬೇಟಿಯಾಗಿರುವದಾಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪಿಐ ರವರು ವೈಸ ರೆಕಾರ್ಡರ ಫಿರ್ಯಾದಿಗೆ ಕೊಟ್ಟಿದ್ದು ಸಂಭಾಷಣೆ ದಾಖಲು ಮಾಡಿಕೊಂಡು ಬರುವಂತೆ ಹೇಳಿ ಕಳುಹಿಸಿದರು. ಅದೇ ದಿನ ಫಿರ್ಯಾದಿಯ ತಂದೆ ತಹಶೀಲ್ದಾರ ಕಛೇರಿ ಶಹಾಪೂರಕ್ಕೆ ಹೋಗಿ ಆರೋಪಿ ಮತ್ತು ಆತನ ನಡುವೆ ನಡೆದ ಸಂಭಾಷಣೆಯನ್ನು ರೇಕಾರ್ಡ ಮಾಡಿಕೊಂಡು ತಂದು ಹಾಜರುಪಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15.03.2014 ರಂದು ಬಂದು ದೂರು ಕೊಟ್ಟಿದ್ದಾಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈಸ ರೇಕಾರ್ಡನಲ್ಲಿ ಇದ್ದ ಧ್ವನಿಯನ್ನು ನಮಗೆ ಕೇಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದಿ ಕೊಟ್ಟ ದೂರು ಮತ್ತು ರೇಕಾರ್ಡನಲ್ಲಿ ಇದ್ದ ಧ್ವನಿ ಒಂದೇ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಧ್ವನಿ ಕೇಳಿಸಿದ ನಂತರ ಸದರಿ

ವೈಸ ರೇಕಾರ್ಡನ್ನು ಕಂಪ್ಯೂಟರಗೆ ಹಾಕಿ ಸಿ.ಡಿ. ಮಾಡಿಸಿ ಅದನ್ನು ಸೀಲ್ ಮಾಡಿದರು ನಾನು ಮತ್ತು ಪಂಚರು ಸಹಿ ಮಾಡಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ಮಹ್ಮದ ಇಸ್ಮಾಯಿಲ ಅವರಿಗೆ ಹಣ ತಂದ ಬಗ್ಗೆ ಪಿಐ ರವರು ಕೇಳಿದಾಗ ಸದರಿ ಹಣವನ್ನು ಇಸ್ಮಾಯಿಲ್ ಕೊಟ್ಟಿದ್ದನ್ನು ಶಿವರೆಡ್ಡಿಯವರು ಎಣಿಸಿ ಅದರ ನಂಬರ ಮತ್ತು ಮೌಲ್ಯವನ್ನು ನಾನು ಬರೆದುಕೊಂಡೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನೀಲಕಂಠ ಪೊಲೀಸರಿಗೆ ಫಿನಾಪ್ತಲಿನ ಪೌಡರನ್ನು ನೋಟುಗಳಿಗೆ ಸವರುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫಿನಾಪ್ತಲಿನ ಪೌಡರ ಮತ್ತು ಸೋಡಿಯಂ ಕಾರ್ಬೋನೇಟ ಇವುಗಳ ಗುಣಧರ್ಮ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಮಹ್ಮದ ಇಸ್ಮಾಯಿಲ್ ಅವರ ಶರ್ಟನ ಜೇಬಿಗೆ ಇಡುವಂತೆ ಹೇಳಿದರು ಅದರಂತೆ ಶಿವರೆಡ್ಡಿ ಆ ಜೇಬನಲ್ಲಿ ಏನಾದರೂ ಇದೇಯೇ ಎಂದು ಪರಿಶೀಲಿಸಿ ನಂತರ ಜೇಬಿನಲ್ಲಿ ಆ ಹಣವನ್ನು ಇಟ್ಟ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸೋಡಿಯಂ ಕಾರ್ಬೋನೇಟ ದ್ರಾವಣವನ್ನು ಶುದ್ಧವಾದ ನೀರಿನಲ್ಲಿ ಬಟ್ಟಲಿನಲ್ಲಿ ಹಾಕಿ ತಯಾರಿಸಿ ಪಂಚ ಸಾಕ್ಷಿ ಶಿವರೆಡ್ಡಿ ಅವರ ಕೈ ಬೆರಳುಗಳನ್ನು ಅದರಲ್ಲಿ ಅದ್ದಿಸಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದ್ರಾವಣವನ್ನು 2 ಬಾಟಲಗಳಲ್ಲಿ ತುಂಬಿ ಅವುಗಳಿಗೆ ಸೀಲ ಮಾಡಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15.03.2014 ರಂದು ಲೋಕಾಯುಕ್ತ ಕಛೇರಿಯಲ್ಲಿ ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಆ ಕಾಲಕ್ಕೆ ಫೋಟೊಗಳನ್ನು ಸಹ ತೆಗೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಎಲ್ಲರೂ ಕೈ ತೊಳೆದುಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಅದೇ ದಿನ ಬೆಳಿಗ್ಗೆ 11-15 ಗಂಟೆಗೆ ನಾವು ಲೋಕಾಯುಕ್ತ ಕಛೇರಿ ಬಿಟ್ಟು ಎರಡು ಜೀಪಗಳಲ್ಲಿ 12-15 ಗಂಟೆಗೆ ಭೀ-ಗುಡಿ ರೋಡಿಗೆ ಇರುವ ಕೆ.ಇ.ಬಿ. ಹತ್ತಿರ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾ ಸಾಮಾಗ್ರಿಗಳನ್ನು ತೆಗೆದುಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಹಾಪೂರ ತಹಶೀಲ್ದಾರ ಕಛೇರಿಗೆ ಹೋದಾಗ 12-15 ಗಂಟೆ ಆಗಿತ್ತು. ನಂತರ ವಾಹನದಿಂದ ಕೆಳಗೆ ಇಳಿದು ನಾನು ಮತ್ತು ಮಹ್ಮದ ಇಸ್ಮಾಯಿಲ್ ಇವರನ್ನು ಪಿಐ ಅವರು ತಹಶೀಲ್ದಾರ ಕಛೇರಿಯ ಒಳಗೆ ಹೋಗುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜೊತೆ ಬಂದವರು ಅಲ್ಲಲ್ಲಿ ನಿಂತುಕೊಂಡು ನಮ್ಮನ್ನು ಗಮನಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಒಳಗೆ ಹೋದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಮಹ್ಮದ ಇಸ್ಮಾಯಿಲ್ ಅವರಿಗೆ ನಮಸ್ತೆ ಎಂದು ಹೇಳಿದ್ದು ನಮ್ಮನ್ನು ಕುಡುವಂತೆ ಹೇಳಿ ಮಹ್ಮದ ಇಸ್ಮಾಯಿಲ ಅವರು ಅವರ ಹಿಂದೆ ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅವರನ್ನು

ಹಿಂಬಾಲಿಸಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹ್ಮದ ಇಸ್ಮಾಯಿಲ್ ಅವರು ಆರೋಪಿಯನ್ನು ಬೆನಕನಳ್ಳಿ ಹೊಲದ ಷರಾ ತಿದ್ದುಪಡಿ ಕೆಲಸ ಏನಾಯಿತು ಎಂದು ಕೇಳಿದ್ದಕ್ಕೆ ಆರೋಪಿ ನಾನು ಕೇಳಿದ ಹಣ ತಂದ್ದಿದಿಯಾ ಎಂದು ಕೇಳಿದರು ಆಗ ಫಿರ್ಯಾದಿ ಹಣ ತಂದಿದ್ದೇನೆ ಎಂದು ಹೇಳಿದ್ದು 3,500/- ರೂಗಳನ್ನು ಆತನ ಟೇಬಲ ಎಡ ಬಾಗದ ಡೆಸ್ಕನಲ್ಲಿ ಹಾಕುವಂತೆ ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಫಿರ್ಯಾದಿ ಹಣವನ್ನು ಡೆಸ್ಕನಲ್ಲಿ ಹಾಕಿದ್ದು ನಾನು ಮತ್ತು ಫಿರ್ಯಾದಿ ಹೊರಗೆ ಬಂದು ಕರವಸ್ತ್ರದಿಂದ ಮುಖ ಒವರಿಸಿಕೊಂಡು ಸಿಗ್ನಲ ಕೊಟ್ಟೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿದ್ದ ಪೊಲೀಸರು ಎಲ್ಲರೂ ಒಳಗೆ ಬಂದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಆರೋಪಿಯ ಎರಡು ಕೈಗಳನ್ನು ಹಿಡಿದರು. ಮಹ್ಮದ ಇಸ್ಮಾಯಿಲ್ ಆರೋಪಿ 3,500/- ಲಂಚ ಪಡೆದಿದ್ದಾನೆ ಎಂದು ಹೇಳಿದ. ಸೋಡಿಯಂ ಕಾರ್ಬೋನೇಟ ಧ್ರಾವಣ ತಯಾರಿಸಿ ಆರೋಪಿಯ ಬಲಗೈ ಬೆರಳು ಅದ್ದಿಸಿದಾಗ ಧ್ರಾವಣ ಯಾವುದೇ ಬಣ್ಣಕ್ಕೆ ತಿರುಗಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿಯ ಎಡಗೈ ಬೆರಳು ಅದ್ದಿಸಿದಾಗ ಧ್ರಾವಣ ಯಾವುದೇ ಬಣ್ಣಕ್ಕೆ ತಿರುಗಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡೆಸ್ಕನಲ್ಲಿ ಇದ್ದ ನೋಟುಗಳನ್ನು ಪಿಐ ರವರು ನನಗೆ ತೆಗೆಯುವಂತೆ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ನೋಟುಗಳನ್ನು ತೆಗೆದು ಅವುಗಳ ಮೌಲ್ಯ ಮತ್ತು ನಂಬರನ್ನು ಮೊದಲು ತಯಾರಿಸಿದ ದಾಖಲೆಗೆ ಹೋಲಿಕೆ ಮಾಡಿದಾಗ ಅವು ಹೊಂದಾಣಿಕೆಯಾಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನೋಟುಗಳನ್ನು ಒಂದು ಕವರಗೆ ಹಾಕಿ ಸೀಲ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ನಾವು ಸಹಿ ಮಾಡಿದ ಚೀಟಿ ಅಂಟಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಡೆಸ್ಕನ ಒಳಗೆ ಹತ್ತಿಯಿಂದ ಒರೆಸಿ ಆ ಹತ್ತಿಯನ್ನು ಸೋಡಿಯಂ ಕಾರ್ಬೋನೇಟ ಧ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು ಅದನ್ನು ಬಾಟಲಗಳಲ್ಲಿ ಹಾಕಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೈಸ ರೇಕಾರ್ಡರನ್ನು ಮಹ್ಮದ ಇಸ್ಮಾಯಿಲ್ ಜೇಬಿನಲ್ಲಿ ಇಟ್ಟುಕೊಂಡು ಹೋಗಿದ್ದ ಅದನ್ನು ಲೋಕಾಯುಕ್ತ ಪೊಲೀಸರು ಪಡೆದುಕೊಂಡು ಶಿರೇಸ್ತೆದಾರ ಪರಶುರಾಮ ಅವರಿಗೆ ಕೇಳಿಸಿದ ಅವರು ನಮ್ಮ ಕಛೇರಿಯ ಮಲ್ಲಪ್ಪ ಅವರ ಧ್ವನಿ ಎಂದು ಗುರುತಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾಗದ ಪತ್ರಗಳನ್ನು ಕೇಳಿದಾಗ ಅದು ಅಲಮಾರಾದಲ್ಲಿ ಇದೆ ಎಂದು ಹೇಳಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಎಲ್ಲ ದಾಖಲೆಗಳನ್ನು ಅಲಮಾರಾದಿಂದ ತೆಗೆದು ಅವುಗಳನ್ನು ವಶಕ್ಕೆ ಪಡೆದು ಸೀಲ್ ಮಾಡಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ನಂತರ ಲೋಕಾಯುಕ್ತ ನಿರೀಕ್ಷಕರು ಆರೋಪಿತರ ಸ್ವರಕ್ಷಣಾ ಹೇಳಿಕೆಯನ್ನು ನೀಡುವಂತೆ ಕೇಳಿದ್ದು ಅದರಂತೆ ಆರೋಪಿತರು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ಸ್ವರಕ್ಷಣಾ ಹೇಳಿಕೆಯಲ್ಲಿ ಚಾಸಾ-1 ರವರು ತಮ್ಮ ಜಮೀನಿನ ಹಿಂಬರಹವನ್ನು ತಿದ್ದುಪಡಿ ಮಾಡಲು ಅವರ ಬಳಿ ಬಂದಿದ್ದು ಅವರೆ ತಮ್ಮ ಟೇಬಲ್ ಡ್ರಾನಲ್ಲಿ ಯಾವುದೇ ಹಣದ ಬೇಡಿಕೆ ಇಡದಿದ್ದರೂ ಹಣ ಹಾಕಿ ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ನೋಡಿ ನಾನು ಮತ್ತು ದೂರುದಾರ ಆರೋಪಿತರು ಹೇಳಿದ್ದು ಸುಳ್ಳು ಇರುತ್ತದೆ ಎಂದು ಲೋಕಾಯುಕ್ತ ನಿರೀಕ್ಷಕರಿಗೆ ತಿಳಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ನಂತರ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಎಲ್ಲ ವಸ್ತುಗಳನ್ನು ಪೊಲೀಸ ನಿರೀಕ್ಷಕರು ತಮ್ಮ ವಶಕ್ಕೆ ಪಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಬಳಕೆ ಮಾಡಿದ ಒಂದು ಕಬ್ಬಿಣದ "GJ" ಸೀಲನ್ನು ನನಗೆ ನೀಡಿ ಅದನ್ನು ವಿಚಾರಣೆಯ ಸಮಯದಲ್ಲಿ ಹಾಜರಪಡಿಸುವಂತೆ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ನಂತರ ಸದರಿ ಪ್ರಕರಣದ ಸಂಪೂರ್ಣ ಘಟನೆಯನ್ನು ಛಾಯಚಿತ್ರಕರಿಸಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯವಾಗಿ ದಿಃ 15.03.2014 ರಂದು ಪೊಲೀಸರು ಮಧ್ಯಾಹ್ನ 1-15 ರಿಂದ 3-00 ಗಂಟೆಯ ವರೆಗೆ ತಹಶೀಲ್ದಾರ ಕಾರ್ಯಾಲಯದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ಪೊಲೀಸರು ತಯಾರಿಸಿ ನನ್ನ ಮತ್ತು ಶಿವರೆಡ್ಡಿ ಮತ್ತು ಪೊಲೀಸ ಉಪ-ನಿರೀಕ್ಷಕರ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ದಿಃ 28.06.2014 ರಂದು ಲೋಕಾಯುಕ್ತ ಪೊಲೀಸರ ಕೋರಿಕೆಯ ಮೇರೆಗೆ ಮತ್ತು ನಮ್ಮ ಮುಖ್ಯ ಗುರುಗಳ ಆದೇಶದ ಮೇರೆಗೆ ನಾನು ಲೋಕಾಯುಕ್ತ ಠಾಣೆಗೆ ಹಾಜರಾಗಿ ಉಪ-ನಿರೀಕ್ಷಕರನ್ನು ಬೇಟಿ ಮಾಡಿ ಅವರು ನನ್ನನ್ನು ಶಹಾಪೂರದ ಲೋಕೋಪಯೋಗಿ ಕಛೇರಿಗೆ ಕರೆದುಕೊಂಡು ಹೋಗಿ ಅಲ್ಲಿ ಚಾಸಾ-8 ಮಿರಾಜುಲ್ಲಾ ರವರನ್ನು ಬೇಟಿ ಮಾಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು, ಚಾಸಾ-8, ಲೋಕಾಯುಕ್ತ ಪೊಲೀಸರು ಜೊತೆಯಲ್ಲಿ ಶಹಾಪೂರ ತಹಶೀಲ್ದಾರ ಕಛೇರಿಗೆ ಹೋಗಿದ್ದು ಚಾಸಾ-8 ರವರಿಗೆ ನಾನು ಈ ಪ್ರಕರಣದ ಘಟನೆಯ ಸಮಯದಲ್ಲಿ ದೂರು ದಾರರು, ನಾನು ಎಲ್ಲಿನಿಂತ್ತಿದ್ದೆವು ಮತ್ತು ಆರೋಪಿತರು ಎಲ್ಲಿ ಕುಳಿತ್ತಿದ್ದರು ಎಂಬುವದನ್ನು ಚಾಸಾ-8 ರವರಿಗೆ ತೋರಿಸಿದ್ದು ಅವರು ಒಂದು ಕಚ್ಚಾ ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ನಾನು ಲೋಕಾಯುಕ್ತ ಪೊಲೀಸರ ಮುಂದೆ ದಿಃ 16.03.2014 ರಂದು ಹೇಳಿಕೆಯನ್ನು ಮತ್ತು ದಿಃ 28.03.2014 ರಂದು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 16.03.2014 ರಂದು ಚಾಸಾ-3 ಶಿವರೆಡ್ಡಿ ಸಹ ನನ್ನಂತೆ ಹೇಳಿಕೆ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.